ಖಂಡಿತವಾಗಿಯೂ ಸಮಾಧಿಯು ಪರಲೋಕದ ಹಂತಗಳಲ್ಲಿ ಮೊದಲ ಹಂತವಾಗಿದೆ. ಒಬ್ಬನು ಅದರಿಂದ ಪಾರಾದರೆ, ಅದರ ನಂತರ ಬರುವುದು ಅದಕ್ಕಿಂತ ಸುಲಭವಾಗಿರುತ್ತದೆ. ಒಂದು ವೇಳೆ ಅವನು ಅದರಿಂದ ಪಾರಾಗದಿದ್ದರೆ, ಅದರ ನಂತರ ಬರುವುದು ಅದಕ್ಕಿಂತ ಕಠಿಣವಾಗಿರುತ್ತದೆ

ಉಸ್ಮಾನ್ರ ವಿಮೋಚಿತ ಗುಲಾಮರಾದ ಹಾನಿಅ್ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ. ಅವರು ಹೇಳಿದರು: ಉಸ್ಮಾನ್ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರವರು ಸಮಾಧಿಯ ಬಳಿ ನಿಂತಾಗ, ತಮ್ಮ ಗಡ್ಡವು ಒದ್ದೆಯಾಗುವವರೆಗೆ ಅಳುತ್ತಿದ್ದರು. ಆಗ ಅವರೊಡನೆ ಕೇಳಲಾಯಿತು: "ನೀವು ಮುಂದೆ ಸ್ವರ್ಗ ಮತ್ತು ನರಕವನ್ನು ನೆನಪಿಸಿಕೊಳ್ಳುತ್ತೀರಿ. ಆಗ ನೀವು ಅಳುವುದಿಲ್ಲ. ಆದರೆ ಇದರ (ಸಮಾಧಿಯ) ಕಾರಣದಿಂದ ಅಳುತ್ತೀರೇಕೆ?" ಅದಕ್ಕೆ ಅವರು ಹೇಳಿದರು: ಅಲ್ಲಾಹುವಿನ ಸಂದೇಶವಾಹಕರು (ಅವರ ಮೇಲೆ ಅಲ್ಲಾಹುವಿನ ಕೃಪೆ ಮತ್ತು ಶಾಂತಿಯಿರಲಿ) ಹೇಳಿದ್ದಾರೆ: "ಖಂಡಿತವಾಗಿಯೂ ಸಮಾಧಿಯು ಪರಲೋಕದ ಹಂತಗಳಲ್ಲಿ ಮೊದಲ ಹಂತವಾಗಿದೆ. ಒಬ್ಬನು ಅದರಿಂದ ಪಾರಾದರೆ, ಅದರ ನಂತರ ಬರುವುದು ಅದಕ್ಕಿಂತ ಸುಲಭವಾಗಿರುತ್ತದೆ. ಒಂದು ವೇಳೆ ಅವನು ಅದರಿಂದ ಪಾರಾಗದಿದ್ದರೆ, ಅದರ ನಂತರ ಬರುವುದು ಅದಕ್ಕಿಂತ ಕಠಿಣವಾಗಿರುತ್ತದೆ". [حسن] [رواه الترمذي وابن ماجه]

ಸತ್ಯವಿಶ್ವಾಸಿಗಳ ನಾಯಕ (ಅಮೀರುಲ್-ಮುಅ್ಮಿನೀನ್) ಉಸ್ಮಾನ್ ಬಿನ್ ಅಫ್ಫಾನ್ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರವರು ಸಮಾಧಿಯ ಬಳಿ ನಿಂತಾಗ, ತಮ್ಮ ಕಣ್ಣೀರಿನಿಂದ ಗಡ್ಡವು ಒದ್ದೆಯಾಗುವವರೆಗೆ ಅಳುತ್ತಿದ್ದರು. ಆಗ ಅವರೊಡನೆ ಕೇಳಲಾಯಿತು: ನೀವು ಮುಂದೆ ಸ್ವರ್ಗ ಮತ್ತು ನರಕವನ್ನು ನೆನಪಿಸಿಕೊಳ್ಳುತ್ತೀರಿ. ಆಗ ಸ್ವರ್ಗದ ಹಂಬಲದಿಂದ ಅಥವಾ ನರಕದ ಭಯದಿಂದ ಅಳುವುದಿಲ್ಲ! ಆದರೆ ಸಮಾಧಿಯ ಕಾರಣದಿಂದ ಅಳುತ್ತೀರೇಕೆ? ಅದಕ್ಕೆ ಅವರು ಹೇಳಿದರು: ಪ್ರವಾದಿಯವರು (ಅವರ ಮೇಲೆ ಅಲ್ಲಾಹುವಿನ ಕೃಪೆ ಮತ್ತು ಶಾಂತಿಯಿರಲಿ) ತಿಳಿಸಿದ್ದಾರೆ: ಸಮಾಧಿಯು ಪರಲೋಕದ ಹಂತಗಳಲ್ಲಿ ಮೊದಲ ಹಂತವಾಗಿದೆ. ಒಬ್ಬನು ಅದರಿಂದ ಪಾರಾಗಿ ವಿಮೋಚನೆಗೊಂಡರೆ, ಅದರ ನಂತರದ ಹಂತಗಳು ಅದಕ್ಕಿಂತ ಸುಲಭವಾಗಿರುತ್ತವೆ. ಒಂದು ವೇಳೆ ಅವನು ಅದರ ಶಿಕ್ಷೆಯಿಂದ ಪಾರಾಗದಿದ್ದರೆ; ಅದರ ನಂತರ ಬರುವ ಶಿಕ್ಷೆಯು ಅದರಲ್ಲಿರುವುದಕ್ಕಿಂತ ಕಠಿಣವಾಗಿರುತ್ತದೆ.

http://sunnah.global/hadeeth/kn/show/11205